**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\6308\2014\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26/05/2017
27

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಮಂಜುನಾಥ ಬಿನ್ ಲೇ.ತಿಮ್ಮಾಬೋವಿ, ಹನುಮಂತಪುರ, ಕೊಟ್ಟಾ ಅಂಚೆ, ಶಿರಾ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಶಿರಾ ತಾಲ್ಲೂಕ್ ಕೊಟ್ಟಾ ಅಂಚೆ ಹನುಮಂತಪುರ ನಿವಾಸಿಯಾದ ಶ್ರೀ.ಮಂಜುನಾಥ ಬಿನ್ ಲೇ.ತಿಮ್ಮಾಭೋವಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕ್ ಕಸಬಾ ಹೋಬಳಿ ಕೊಟ್ಟಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಲಕ್ಷ್ಮಿಕಾಂತ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಶಿರಾ ತಾಲ್ಲೂಕ್ ಕೊಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಓಜುಗುಂಟೆ ಸರ್ವೆ ನಂ.66ರಲ್ಲಿ ನಿವೇಶನಗಳು ಹಂಚಿಕೆಯಾಗಿದ್ದು, ಆ ಪೈಕಿ ನಿವೇಶನ ಸಂ:21, 22, 28 ಮತ್ತು 29ರ ನಿವೇಶನದ ಉತ್ತರಕ್ಕೆ ರಸ್ತೆಯೆಂದು ಹಕ್ಕು ಪತ್ರಗಳ ಪ್ರಕಾರ ಚಕ್ಕುಬಂದಿಯಲ್ಲಿ ನಮೂದಾಗಿದ್ದು, ಆ ಪ್ರದೇಶದಲ್ಲಿ ಕೆಲವರು ಅಕ್ರಮವಾಗಿ ಕಟ್ಟಡ ನಿರ್ಮಿಸುತ್ತಿದ್ದು, ಈ ಸಂಬಂಧ ಎದುರುದಾರರಿಗೆ ಸುಮಾರು 3 ವರ್ಷಗಳಿಂದಲೂ ಲಿಖಿತ ದೂರು ನೀಡಿದ್ದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ದಿ:15/09/13ರಂದು ಸದರಿ ದೂರಿನ ವಿಚಾರವಾಗಿ ಸ್ಥಳ ಪರಿಶೀಲಿಸಲಾಗಿ, ಅಮರಾಪುರ ರಸ್ತೆಯಿಂದ ದೂರುದಾರರ ಮನೆಗಳಿಗೆ ಶ್ರೀ.ರಂಗೇಶ್ ಬಿನ್ ಪದ್ಮನಾಭಯ್ಯ ರವರ ಮನೆಯ

ಉತ್ತರ ಭಾಗದ ಪಕ್ಕದಲ್ಲಿ ರಸ್ತೆಯಿದ್ದು, ಅಮರಾಪುರ ರಸ್ತೆಯಿಂದ ಶ್ರೀಮತಿ.ಸಿದ್ದಗಂಗಮ್ಮ ಕೋಂ ನರಸಿಂಹಮೂರ್ತಿ ರವರ ಮನೆಯ ದಕ್ಷಿಣ ಭಾಗಕ್ಕಿರುವ ರಸ್ತೆಯಿಂದಲೂ ಸಹ ದೂರುದಾರರ ಮನೆಗೆ ಹೋಗಬಹುದೆಂಬ ಅಂಶವನ್ನು ಮಹಜರ್ ಸಮಯದಲ್ಲಿ ಕಂಡು ಬಂದಿದೆ. ದೂರುದಾರರು ಸದರಿ ಹುಲ್ಲು ಕಟ್ಟಡ ಕಾಂಪೌಂಡ್ ವಿಚಾರಕ್ಕೆ ಸಂಬಂಧಪಟ್ಟಂತೆ ಆಶ್ರಯ ನಿವೇಶನ ವಿತರಿಸುವ ಮೊದಲೇ, ಗೋಡೆ ನಿರ್ಮಾಣಗೊಂಡಿದೆ. ದೂರುದಾರರ ಮನೆಗಳಿಗೆ ಅಮರಾಪುರ ರಸ್ತೆಯಿಂದ ಉತ್ತರ ಭಾಗದಲ್ಲಿ ಮತ್ತು ಇದೇ ಅಮರಾಪುರ ರಸ್ತೆಯಿಂದ ದಕ್ಷಿಣ ಭಾಗಕ್ಕಿರುವ ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ದೂರುದಾರರ ಹಕ್ಕುಪತ್ರದಲ್ಲಿರುವಂತೆ ಉತ್ತರಕ್ಕೆ ರಸ್ತೆಯಿರುತ್ತದೆಂದು ತಾತ್ಕಾಲಿಕ ನಕ್ಷೆ ತಯಾರಿಸಲಾಗಿದೆ ಮತ್ತು ದೂರುದಾರರ ಮನೆಗಳಿಗೆ ಹೋಗಲು ರಸ್ತೆ ಇದೆಯೆಂದು ಹೇಳಿದ್ದಾರೆ.

4. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಅಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ಅಮರಾಪುರ ರಸ್ತೆಯಿಂದ ದೂರುದಾರರ ಮನೆಗಳಿಗೆ ಶ್ರೀ.ರಂಗೇಶ್ ಬಿನ್ ಪದ್ಮನಾಭಯ್ಯ ರವರ ಮನೆಯ ಉತ್ತರ ಭಾಗದ ಪಕ್ಕದಲ್ಲಿ ರಸ್ತೆಯಿದ್ದು, ಅಮರಾಪುರ ರಸ್ತೆಯಿಂದ ಶ್ರೀಮತಿ.ಸಿದ್ದಗಂಗಮ್ಮ ಕೋಂ ನರಸಿಂಹಮೂರ್ತಿ ರವರ ಮನೆಯ ದಕ್ಷಿಣ ಭಾಗಕ್ಕಿರುವ ರಸ್ತೆಯಿಂದಲೂ ಸಹ ದೂರುದಾರರ ಮನೆಗೆ ಹೋಗಬಹುದೆಂಬ ಅಂಶವನ್ನು ಮಹಜರ್ ಸಮಯದಲ್ಲಿ ಕಂಡು ಬಂದಿದೆ. ದೂರುದಾರರು ಸದರಿ ಹುಲ್ಲು ಕಟ್ಟಡ ಕಾಂಪೌಂಡ್ ವಿಚಾರಕ್ಕೆ ಸಂಬಂಧಪಟ್ಟಂತೆ ಆಶ್ರಯ ನಿವೇಶನ ವಿತರಿಸುವ ಮೊದಲೇ, ಗೋಡೆ ನಿರ್ಮಾಣಗೊಂಡಿದೆ. ಈ ಬಗ್ಗೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಶಿರಾ ರವರಲ್ಲಿ ಅಸಲು ಧಾವಾ ಸಂ:20/2012ರಂತೆ ಹಾಲೀ ನಿವೇಶನ ಹಾಗೂ ಮನೆಯ ಅಳತೆ ಹಾಗೂ ಚೆಕ್ಕುಬಂದಿ ಸರಿಯಾಗಿರುತ್ತದೆಂದು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರು ವರದಿ ಸಲ್ಲಿಸುವುದಾಗಿ ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಓಜುಗುಂಟೆ ಗ್ರಾಮದ ಸರ್ವೆ ನಂ.66ರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಆ ನಿವೇಶನಗಳ ಪೈಕಿ ನಿವೇಶನಗಳ ಸಂ:21, 22, 28 ಮತ್ತು 29 ನಿವೇಶನಕ್ಕೆ ಉತ್ತರಕ್ಕೆ ರಸ್ತೆಯೆಂದು ನಮೂದಿಸಲಾಗಿದೆ. ಈ ಬಗ್ಗೆ ನಿವೇಶನ ಸಂ:22ರಲ್ಲಿ ಮತ್ತು ಈ 3 ನಿವೇಶನಗಳ ಸ್ಕೆಚ್‌ನಲ್ಲಿಯೂ ಸಹ ನಮೂದಾಗಿದೆ. ಅದೇ ರೀತಿ, ಸ್ಥಳ ಮಹಜರ್ ಮತ್ತು ಕಚ್ಚಾ ನಕ್ಷೆಯ ಪ್ರತಿಯಲ್ಲೂ ಸಹ ಸದರಿ ರಸ್ತೆ ಅಸ್ತಿತ್ವದಲ್ಲಿರುವ ಬಗ್ಗೆ ನಮೂದಾಗಿದೆ. ಸದರಿ ಸ್ಥಳಕ್ಕೆ ಸಂಬಂಧಪಟ್ಟ ಫೋಟೋಗಳಲ್ಲಿ, ಸದರಿ ರಸ್ತೆಯಲ್ಲಿಯೇ ಹಿಂದಿನಿಂದಲೂ ಕಲ್ಲು ಕಾಂಪೌಂಡ್ ಅಸ್ತಿತ್ವದಲ್ಲಿರುವುದು ಕಂಡು ಬಂದಿದೆ. ಸದರಿ ರಸ್ತೆಯು ಹಿಂದಿನಿಂದಲೂ ಸಹ ಅಸ್ತಿತ್ವದಲ್ಲಿದ್ದು, ಅದನ್ನು ಒತ್ತುವರಿ ಮಾಡಿ ಅಕ್ರಮವಾಗಿ ಕಲ್ಲು ಕಾಂಪೌಂಡ್ ನಿರ್ಮಿಸಿರುವುದನ್ನು ತೆರವುಗೊಳಿಸಿ, ಸಾರ್ವಜನಿಕ ಉಪಯೋಗಕ್ಕೆ ಅವಕಾಶ ಕಲ್ಪಿಸಿಕೊಡುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಸದರಿ ರಸ್ತೆ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದು, ಅದನ್ನು ಒತ್ತುವರಿ ಮಾಡಿ, ಕಲ್ಲು ಕಾಂಪೌಂಡ್ ನಿರ್ಮಿಸಿರುವ ವಿಚಾರ ಗೊತ್ತಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ, ಕರ್ತವ್ಯ ಲೋಪ ಎಸಗಿದ್ದಾರೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಆದ್ದರಿಂದ, ಸದರಿ ಒತ್ತುವರಿಯಾಗಿ ನಿರ್ಮಿಸಿರುವ ಕಲ್ಲು ಕಾಂಪೌಂಡನ್ನು ತೆರವುಗೊಳಿಸಿ, ಸಾರ್ವಜನಿಕ ಉಪಯೋಗಕ್ಕೆ ಅವಕಾಶ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 27/5/17

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**